**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 03.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ.5(ಎ) ಮತ್ತು (ಬಿ) ಮತ್ತು 6 ನೇ ಪ್ರತಿವಾದಿ ಪರ ವಕೀಲರಿಂದಃ**

3. ನನ್ನ ತಂದೆಯ ಹೆಸರು ಕಳಸಪ್ಪ ನಿಂಗಪ್ಪ ಹೂಲಿಮನಿ. ಇದೇ ನನ್ನ ತಂದೆಯ ಹೆಸರು ಎಂದು ತೋರಿಸಲು ದಾಖಲೆ ಹಾಜರಪಡಿಸಿಲ್ಲ ಆದರೆ ಹಾಜರಪಡಿಸುತ್ತೇನೆ. ನನ್ನ ತಂದೆ ಯಾವ ಇಸ್ವಿಯಲ್ಲಿ ದತ್ತಕಕ್ಕೆ ಹೋಗಿರುತ್ತಾರೆಂದು ನನಗೆ ಗೊತ್ತಿಲ್ಲ ಆಗ ನಾವು ಚಿಕ್ಕವರಿದ್ದೇವು. ನನ್ನ ತಾಯಿಯ ಹೆಸರು ಶಿವಕ್ಕ ಕಿತ್ತೂರ ಅಲಿಯಾಸ ಹೂಲಿಮನಿ. ಅವರ ಪೂರ್ತಿ ಹೆಸರು ಏನಿದೆ ಎಂದು ತೋರಿಸಲು ನಾನು ದಾಖಲೆ ಹಾಜರಪಡಿಸಿರುತ್ತೇನೆ. ನಾವು ಚಿಕ್ಕವರಿದ್ದಾಗಲೇ ನನ್ನ ತಾಯಿ ತೀರಿಕೊಂಡಿರುತ್ತಾರೆ, ಅವರು ತೀರಿಕೊಂಡ ಇಸ್ವಿ ನನಗೆ ಗೊತ್ತಿಲ್ಲ. ನನ್ನ ತಾಯಿ ಯಾವ ಇಸ್ವಿಯಲ್ಲಿ ತೀರಿಕೊಂಡಿರುತ್ತಾರೆಂದು ತೋರಿಸಲು ದಾಖಲೆ ಹಾಜರಪಡಿಸಿರುತ್ತೇನೆ. ಶಿವಕ್ಕ ತೀರಿಕೊಂಡ ನಂತರ ನನ್ನ ತಂದೆ ಪಾರವ್ವ ಈಕೆಯನ್ನು ಮದುವೆಯಾದರು. ಈ ದಾವೆ ಸಲ್ಲಿಸುವ ಸಮಯದಲ್ಲಿ ನಮ್ಮ ವಕೀಲರಿಗೆ ನಾನು ಸರಿಯಾದ ಮಾಹಿತಿ ನೀಡಿರುತ್ತೇನೆ ಆದರೆ ಅವರು ನನ್ನ ತಾಯಿಯ ಹೆಸರನ್ನು ಶಿವಕ್ಕ ಎಂದು ನಮೂದಿಸುವುದನ್ನು ಬಿಟ್ಟು ಸಾವಕ್ಕ ಎಂದು ನಮೂದಿಸಿರುತ್ತಾರೆ. ನಾನು ಶಾಲೆ ಕಲಿತಿರುವುದಿಲ್ಲ. ನನ್ನ ಮಲತಾಯಿ ಪಾರವ್ವ ಈಕೆಗೆ ಮಕ್ಕಳು ಇರಲಿಲ್ಲ. ನಾನು ಶಿವಕ್ಕ ಈಕೆಯ ವಾರಸುದಾರಳೆಂದು ತೋರಿಸಲು ದಾಖಲೆಗಳನ್ನು ನಮ್ಮ ವಕೀಲರ ಹತ್ತಿರ ನೀಡಿರುತ್ತೇನೆ. ನಾನು ವಾರಸಾ ಪ್ರಮಾಣಪತ್ರ ಪಡೆಯುವಾಗ ಪಾರವ್ವಳ ಮಗಳು ಎಂದು ನಾನು ತಿಳಿಸಿರುತ್ತೇನೆ. ಸದರಿ ಪಾರವ್ವ ಈಕೆಯೇ ನಮ್ಮನ್ನು ಜೋಪಾನ ಮಾಡಿರುತ್ತಾರೆ.

ಪಾರವ್ವ ಈಕೆ ದಿಃ24/04/2011 ರಂದು ತೀರಿಕೊಂಡಿರುತ್ತಾರೆಂದು ನಿಪಿ.6 ರಲ್ಲಿ ಬರೆದಿದೆ ಎಂದರೆ ಸರಿ. ನಿಪಿ.7 ದಾಖಲೆಯಲ್ಲಿ ಕಳಸಪ್ಪ ನಿಂಗಪ್ಪ ಹುಲಮನಿ ಇವರು 31/05/2011 ರಂದು ತೀರಿಕೊಂಡಿರುತ್ತಾರೆಂದು ಬರೆದಿದೆ ಎಂದರೆ ಸರಿ. ಪಾರವ್ವ ತೀರಿಕೊಂಡ ನಂತರ ಕಳಸಪ್ಪ ತೀರಿಕೊಂಡಿರುತ್ತಾರೆಂದರೆ ಸರಿ. ನಿಪಿ.6 ದಾಖಲೆಯಲ್ಲಿ ನಿಮ್ಮ ತಂದೆಯ ಹೆಸರು ವಾರಸುದಾರರೆಂದು ತೋರಿಸಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆ ತೀರಿಕೊಂಡ ನಂತರ ನಾವು ಸದರಿ ದಾಖಲೆಯನ್ನು ಪಡೆದಿರುತ್ತೇವೆಂದು ನುಡಿಯುತ್ತಾರೆ. ನನ್ನ ಆಧಾರ ಕಾರ್ಡ ಹಾಗೂ ರೇಶನ್ ಕಾರ್ಡಗಳನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ನಾನು ಹಾಗೂ ಪ್ರತಿವಾದಿ ನಂ.1 ಶಿವಕ್ಕಳ ವಾರಸುದಾರರೆಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ದತ್ತಕಕ್ಕೆ ಹೋಗಿರುತ್ತಾರೆಂದು ತೋರಿಸಲು ನಾನು ದಾಖಲೆ ಹಾಜರಪಡಿಸಿರುತ್ತೇನೆ. ನಾನು ಹಾಗೂ ಪ್ರತಿವಾದಿ ನಂ.1 ಕಳಸಪ್ಪ ಇವರ ವಾರಸುದಾರರೆಂದು ತೋರಿಸಲು ಸಹ ದಾಖಲೆ ಹಾಜರಪಡಿಸಿರುತ್ತೇನೆ. ನಿಪಿ.6 ರಲ್ಲಿ ರೇಣವ್ವ ಕೋಂ ಮಡಿವಾಳಪ್ಪ ಹುಲಮನಿ ಎಂದು ಹೆಸರು ಇದೆ ಅವರು ಯಾರು ಎಂದರೆ ಸಾಕ್ಷಿ ನನ್ನ ಅಕ್ಕ ಎಂದು ನುಡಿಯುತ್ತಾರೆ.

4. ದಾವಾ ಶೆಡ್ಯೂಲ್ ಅನುಕ್ರಮ ಸಂಖ್ಯೆ.2 ಆಸ್ತಿಯ ನಂಬರ ನನಗೆ ಹೇಳಲು ಬರುವುದಿಲ್ಲ. ಸದರಿ ಆಸ್ತಿಗೆ ಮೂಲತಃ ಯಾರು ಮಾಲೀಕರು ಹಾಗೂ ಸದರಿ ಆಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಗೆ ಎಷ್ಟು ಜನ ಮಾಲೀಕರು ಇರುತ್ತಾರೆ ಎಂಬ ಬಗ್ಗೆ ನಾನು ದಾಖಲೆ ನೋಡಿರುವುದಿಲ್ಲ. ಸದರಿ ಆಸ್ತಿಗೆ ಮೂಲತಃ ಕಳಸಪ್ಪ ದತ್ತಕ ತಂದೆ ದ್ಯಾಮಪ್ಪ ಹುಲಮನಿ, ಗೂಳನಗೌಡ ರುದ್ರಗೌಡ ಹುಲಮನಿ, ಮಹಾದೇವಗೌಡ ತಂದೆ ರುದ್ರಗೌಡ ಹುಲಮನಿ ಮತ್ತು ಯಲ್ಲಪ್ಪ ತಂದೆ ಗೋವಿಂದಪ್ಪ ಹುಲಮನಿ ಇವರು

ಮಾಲೀಕರು ಎಂದರೆ ನನಗೆ ಗೊತ್ತಿಲ್ಲ. ಇವರೆಲ್ಲ ಸೇರಿ ದಿಃ26/03/2011 ರಂದು ಮೃತ ಪ್ರತಿವಾದಿ ನಂ.5 ಇವರ ಹೆಸರಿಗೆ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಖರೀದಿ ಆಧಾರದ ಮೇಲೆ ದಾವಾ ಶೆಡ್ಯೂಲ್ ಅನುಕ್ರಮ ಸಂ.2 ಆಸ್ತಿಯ ದಾಖಲೆಗಳಲ್ಲಿ ಅವರ ಹೆಸರು ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗೆ ಪ್ರತಿವಾದಿ ನಂ.5 ಇವರ ಹೆಸರು ದಾಖಲಾಗುವಾಗ ನೀವೇನಾದರೂ ತಕರಾರು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಸದರಿ ವಿಷಯ ನನಗೆ ನಂತರ ಗೊತ್ತಾಯಿತು ಹಾಗಾಗಿ ತಕರಾರು ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ನನಗೆ ವಿಷಯ ಗೊತ್ತಾದ ನಂತರ ನಾನು ತಕರಾರು ಸಲ್ಲಿಸಿರುತ್ತೇನೆ. ಸದರಿ ತಕರಾರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರಪಡಿಸುತ್ತೇನೆ. ಮೃತ ಪ್ರತಿವಾದಿ ನಂ.5 ಇವರು ಸದರಿ ಆಸ್ತಿಯನ್ನು ಪ್ರತಿವಾದಿ ನಂ.6 ಇವರಿಗೆ ದಿಃ 17/03/2012 ರಂದು ನೊಂದಾಯಿತ ಭಕ್ಷಿಶ್ ಪತ್ರದ ಮೂಲಕ ಭಕ್ಷಿಶ್ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಭಕ್ಷಿಶ್ ಪತ್ರದ ಆಧಾರದ ಮೇಲೆ ಪ್ರತಿವಾದಿ ನಂ.6 ಇವರ ಹೆಸರು ದಾವಾ ಶೆಡ್ಯೂಲ್ ಅನುಕ್ರಮ ಸಂ.2 ಆಸ್ತಿಗೆ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಕಳಸಪ್ಪ ಹುಲಮನಿ ಇವರು ಮಾಡಿಕೊಟ್ಟ ಖರೀದಿ ಪತ್ರಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆಂದು ನಾನು ನೋಡಿಲ್ಲ. ಸದರಿ ದಾಖಲೆಗೆ ಸಾಕ್ಷಿದಾರರಾಗಿ ಯಾರು ಯಾರು ಸಹಿ ಮಾಡಿರುತ್ತಾರೆಂದು ಸಹ ನನಗೆ ಗೊತ್ತಿಲ್ಲ. ಕಳಸಪ್ಪ ಹುಲಮನಿ ಮತ್ತು ಪಾರವ್ವ ಇಬ್ಬರು ಕೂಡಿಯೇ ವಾಸವಾಗಿದ್ದರು. ನಾವು ಪಾರವ್ವಳ ಜೊತೆ ಚೆನ್ನಾಗಿ ಸಂಬಂಧ ಹೊಂದಿದ್ದೇವು ಹಾಗೂ ನಮ್ಮ ತವರು ಮನೆಗೆ ಹೋಗಿ ಬಂದು ಮಾಡುತ್ತಿದ್ದೇವು. ಪಾರವ್ವ ಸಹ ನಮ್ಮ ಜೊತೆ ಪ್ರೀತಿ ವಿಶ್ವಾಸದಿಂದ ಇದ್ದರು ಹಾಗೂ ನನ್ನ ಮನೆಗೆ ಹೋಗಿ ಬಂದು ಮಾಡುತ್ತಿದ್ದರು.

5. ನನ್ನ ಹಾಗೂ ಪ್ರತಿವಾದಿ ನಂ.1 ಇವರ ಮದುವೆ ಯಾವ ಇಸ್ವಿಯಲ್ಲಿ

ಆಗಿರುತ್ತದೆಂದು ನನಗೆ ಗೊತ್ತಿಲ್ಲ ಆದರೆ ನನ್ನ ಮದುವೆಯಾಗಿ 50 ವರ್ಷಗಳ ಮೇಲ್ಪಟ್ಟು ಆಗಿದೆ. ಈ ದಾವೆಯಲ್ಲಿ ಕಾಣಿಸಿದ ಆಸ್ತಿಗಳು ಮಾತ್ರ ನಮ್ಮ ಮನೆತನದ ಆಸ್ತಿಗಳಾಗಿರುತ್ತವೆ ಬೇರೆ ಆಸ್ತಿಗಳು ಇರುವುದಿಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಬೇರೆ ಮಾಲೀಕರು ಸಹ ಇದ್ದಾರೆ ಹಾಗೂ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಅನುಕ್ರಮ ನಂ.2 ಆಸ್ತಿಯಲ್ಲಿ ನನಗೆ ಯಾವುದೇ ರೀತಿ ಪಾಲು ಅಥವಾ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಕಳಸಪ್ಪ ಹಾಗೂ ಇತರರು ಪ್ರತಿವಾದಿ ನಂ.5 ಇವರಿಗೆ ಕಾನೂನುಬದ್ಧವಾಗಿ ಈ ಆಸ್ತಿಯ ಬಗ್ಗೆ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಕಳಸಪ್ಪ ಇವರು ಅವರ 2 ನೇಯ ಹೆಂಡತಿಯಾದ ಪಾರವ್ವ ಈಕೆಯ ಮಾತು ಕೇಳಿ ಕುಟುಂಬದ ಅವಶ್ಯಕತೆ ಇಲ್ಲದೇ ಇದ್ದರೂ ಸಹ ದಾವಾ ಶೆಡ್ಯೂಲ್ ಅನುಕ್ರಮ ಸಂ.2 ಆಸ್ತಿಯನ್ನು ಮಾರಾಟ ಮಾಡಿರುತ್ತಾರೆಂದು ಹೇಳಿರುವ ವಿಷಯ ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**